ಬೇಸಾಯ ಕ್ರಮಗಳು


| ಬೆಳೆ | ನಾಟಿಯ ಕಾಲ | ಸೂಕ್ತ ತಳಿ | ಅಂತರ ಅಡಿಗಳಲ್ಲಿ | ಅವಧಿ |
|---|---|---|---|---|
| ಸೌತೆಕಾಯಿ | ಜನವರಿ–ಫೆಬ್ರವರಿ | ಸಾಂಬಾರು ಸೌತೆ, ಮುಳ್ಳು ಸೌತೆ, ಜಪನೀಸ್ ಲಾಂಗ್ ಗ್ರೀನ್, ಸ್ಟ್ರೇಟ್ | 6.5'ಫಿ3' | 45–60 ದಿನಗಳು |
| ತೊಂಡೆ | ಅಕ್ಟೋಬರ್–ನವೆಂಬರ್ | ಡಿ.ಆರ್.ಸಿ–1, ಡಿ.ಆರ್.ಸಿ–2, ಸುಲಭ, ಅರ್ಕಾ ನೀಲಾಂಚಲ್ | 6'ಫಿ2' | ಬಹುವಾರ್ಷಿಕ |
| ಹೀರೆಕಾಯಿ | ಜೂನ್–ಜುಲೈ ಜನವರಿ–ಫೆಬ್ರವರಿ | ಪೂಸಾ ನಸದಾರ್, ಸೆಲೆಕ್ಷನ್ 4–12, ಅರ್ಕಾ ಸುಜಾತ, ಅರ್ಕಾ ಸುಮೀತ್ | 4'ಫಿ3' | 100–110 ದಿನಗಳು |
| ಹಾಗಲ ಕಾಯಿ | ನವೆಂಬರ್–ಡಿಸೆಂಬರ್ | ಅರ್ಕಾ ಹರಿತ್, ಕೊಯಿಮತ್ತೂರ್ ಲಾಂಗ್, ಪ್ರಿಯ | 3' ಫಿ3' | 120–130 ದಿನಗಳು |
| ಸೋರೆಕಾಯಿ | ಅಕ್ಟೋಬರ್–ನವೆಂಬರ್ | ಪೂಸಾ ಸಮರ್, ಪ್ರೊಲಿಫಿಕ್ ಲಾಂಗ್, ಅರ್ಕಾ ಬಹಾರ್, ಪೂಸಾ ಹೈಬ್ರಿಡ್–3 | 10'ಫಿ3' | 120–130 ದಿನಗಳು |
| ಬೆಂಡೆ | ಜೂನ್–ಜುಲೈ | ಅರ್ಕಾ ಅನಾಮಿಕ, ಅರ್ಕಾ ಅಭಯ್, ಪೂಸಾ ಸವಾನಿ, ವೈಟ್ ವೆಲ್ವೆಟ್ (ಹಾಲು ಬೆಂಡೆ) | 4'ಫಿ3' | 120–130 ದಿನಗಳು |
| ಬದನೆ | ಸೆಪ್ಟೆಂಬರ್ ಜನವರಿ | ಮಟ್ಟಿಗುಳ್ಳ, ವೆಸ್ಟ್ ಕೋಸ್ಟ್ ಗ್ರೀನ್ ರೌಂಡ್ | 2'ಫಿ2' | 110–120 ದಿನಗಳು |
| ಅಲಸಂದೆ | ಸೆಪ್ಟೆಂಬರ್ ಅಕ್ಟೋಬರ್ | ಅರ್ಕಾ ಮಂಗಳ | 3'ಫಿ1.5' | 100–110 ದಿನಗಳು |
| ಹರಿವೆ | ಸೆಪ್ಟೆಂಬರ್–ಅಕ್ಟೋಬರ್ | ಅರ್ಕಾ ಸುಗಂಧಿ, ಅರ್ಕಾ ಅರುನಿಮ | 10'ಫಿ6' ಉದ್ದಗಲ ಮಡಿಗಳು | 90 ದಿನಗಳು |
| ಪಾಲಕ್ | ಸೆಪ್ಟೆಂಬರ್ – ನವೆಂಬರ್ | ಪೂಸಾ ಜ್ಯೋತಿ, ಆಲ್ ಗ್ರೀನ್, ಅರ್ಕಾ ಅನುಪಮ | 10'ಫಿ6' ಉದ್ದಗಲ ಮಡಿಗಳು | 90 ದಿನಗಳು |
| ಮೆಂತೆ | ಆಗಸ್ಟ್ – ನವೆಂಬರ್ | ಪೂಸಾ ಅರ್ಲಿ ಬಂಚಿಂಗ್, ಪೂಸಾ ಕಸ್ತೂರಿ ಸೆಲೆಕ್ಷನ್ | 10' ಫಿ6' ಉದ್ದಗಲ ಮಡಿಗಳು | 90 ದಿನಗಳು |
| ನುಗ್ಗೆ | ಜೂನ್ –ಜುಲೈ | ಭಾಗ್ಯ (ಕೆ.ಡಿ.ಎಮ್–01) | 10'ಫಿ10' (ಗಿಡ್ಡ) 16'ಫಿ16' (ಎತ್ತರ) | ಬಹು ವಾರ್ಷಿಕ |
| ಕೊತ್ತಂಬರಿ | ಸೆಪ್ಟೆಂಬರ್–ಅಕ್ಟೋಬರ್ | ಅರ್ಕಾ ಇಶಾ | 22.5 ಸೆಂ.ಮೀ ಸಾಲುಗಳು | 90–100 ದಿನಗಳು |
| ಪಪ್ಪಾಯ | ಆಗಸ್ಟ್–ಸೆಪ್ಟೆಂಬರ್ | ತೈವಾನ್ ರೆಡ್ ಲೇಡಿ, ಸೋಲೊ | 6' ಫಿ6' | ಬಹುವಾರ್ಷಿಕ |



ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ., ಕಂಕನಾಡಿ, ಮಂಗಳೂರು – 575 002

# ಉತ್ತಮ ಆರೋಗ್ಯಕ್ಕಾಗಿ ಪೌಷ್ಠಿಕ ಕೈತೋಟ ಮತ್ತು ತಾರಸಿ ತೋಟ




ಮನೆಯ ಹಿಂಭಾಗ / ಮುಂಭಾಗದಲ್ಲಿರುವ ಸ್ಥಳವನ್ನು ಉಪಯೋಗಿಸಿ ಕುಟುಂಬಕ್ಕೆ ಬೇಕಾಗುವ ತರಕಾರಿ ಮತ್ತು ಹಣ್ಣುಗಳನ್ನು ಬೆಳೆಸುವುದೇ ಕೈತೋಟ. ದೈನಂದಿನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲು ಒಬ್ಬ ಮನುಷ್ಯ ದಿನಕ್ಕೆ 300 ಗ್ರಾಂ. ತರಕಾರಿಯನ್ನು 100 ಗ್ರಾಂ. ಹಣ್ಣುಗಳನ್ನು ಸೇವಿಸಬೇಕು. ಆದರೆ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಇವುಗಳ ಲಭ್ಯತೆ ತೀರ ಕಡಿಮೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ತರಕಾರಿಗಳ ಬೆಲೆ ದುಬಾರಿಯಾಗಿದ್ದು, ತಾಜಾತನದಿಂದ ಕೂಡಿರುವುದಿಲ್ಲ. ಕಡಿಮೆ ಖರ್ಚಿನಲ್ಲಿ ಸ್ವಲ್ಪ ಸ್ಥಳಾವಕಾಶದಲ್ಲಿ ಉತ್ಕೃಷ್ಟ ಮತ್ತು ಅಧಿಕ ಪೌಷ್ಠಿಕತೆಯ ತರಕಾರಿಗಳ ಉತ್ಪಾದನೆ ಬಹಳ ಮಹತ್ವವೆನಿಸಿಕೊಂಡಿದೆ. ದಿನ ದಿನಕ್ಕೆ ಹೆಚ್ಚುತ್ತಿರುವ ಹಣ್ಣು ತರಕಾರಿಗಳ ಬೆಲೆಗಳು ಜನಜೀವನ ನಿರ್ವಹಣೆಯನ್ನು ಸಂಕಷ್ಟಕ್ಕೀಡು ಮಾಡಿದೆ. ಇಂತಹ ಸನ್ನಿವೇಶಗಳಲ್ಲಿ ಇದ್ದಷ್ಟು ಜಾಗದಲ್ಲಿ ಕೈತೋಟದ ನಿರ್ಮಾಣ ದುರ್ಬಲ ವರ್ಗದವರಿಗೆ ಆರ್ಥಿಕವಾಗಿ ಮತ್ತು ಆರೋಗ್ಯ ದೃಷ್ಟಿಯಿಂದ ನೆರವಾಗಬಲ್ಲದು.

**ಉಪಯೋಗಗಳು**

1. ಮನೆಗೆ ಬೇಕಾದ ಪೌಷ್ಠಿಕ ಹಣ್ಣು, ತರಕಾರಿ, ಹೂವು ನಾವೇ ಬೆಳೆಯಬಹುದು.
2. ವಿಷರಹಿತ ಹಣ್ಣು, ತರಕಾರಿ, ಹೂವುಗಳನ್ನು ಒದಗಿಸುತ್ತದೆ.
3. ಹಸಿರು ವಾತಾವರಣದಿಂದ ಶುದ್ಧಗಾಳಿ ದೊರೆಯುವುದಲ್ಲದೇ ಮನಸ್ಸಿಗೆ ನೆಮ್ಮದಿ ಮತ್ತು ಆನಂದ ದೊರೆಯುವುದು. ಮಾನಸಿಕವಾಗಿ ಅಸ್ವಸ್ಥಗೊಂಡವರು ಈ ಹಸಿರಿನ ಸೊಬಗಿನಿಂದ ಆನಂದವನ್ನು ಪಡೆಯಬಹುದು.

4. ಕೈತೋಟ ಮನೆಯ ಆನಂದವನ್ನು ಹೆಚ್ಚಿಸುವುದಲ್ಲದೇ ಸುತ್ತಲಿನ ವಾತಾವರಣವನ್ನು ತಿಳಿಯಾಗಿಸಿ ಪ್ರಶಾಂತತೆಯನ್ನು ಕಾಪಾಡುತ್ತದೆ.

5. ಮನೆಯ ಸುತ್ತ ಹೆಚ್ಚು ಸ್ಥಳವಿದ್ದರೆ ಹೆಚ್ಚು ಬೆಳೆಗಳನ್ನು ಬೆಳೆದು ಅಧಿಕ ಹಣ ಗಳಿಸಬಹುದು.

6. ಮನೆಯಿಂದ ಹೊರಗೆ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಬಹುದು. ಕೈತೋಟದಲ್ಲಿ ಕೆಲಸ ಮಾಡುವುದರಿಂದ ಮನೆಯ ಮಕ್ಕಳಿಗೆ ಮತ್ತು ಗೃಹಿಣಿಯರಿಗೆ ಬಿಡುವಿನ ವೇಳೆಯಲ್ಲಿ ಕೆಲಸ ಸಿಗುತ್ತದೆ.

**ತಾರಸಿ ತೋಟಕ್ಕೆ ಯೋಜನೆ ತಯಾರಿಸುವುದು**

- ಯಾವುದೇ ತಾರಸಿ ತೋಟ ಮಾಡಲು ಯೋಜನೆ ತಯಾರಿಸುವಾಗ ವೈಯಕ್ತಿಕ ಅಭಿರುಚಿ ಮತ್ತು ಸೌಂದರ್ಯೋ ಪಾಸನಾ ಅರಿವುಗಳು ಬಹುಮುಖ್ಯವಿರುತ್ತವೆ.
- ಕುಂಡಗಳಿಗೆ ಗೊಬ್ಬರ ಮತ್ತು ಮಣ್ಣುಗಳ ಮಿಶ್ರಣ ತುಂಬಿ, ಉಪ್ಪರಿಗೆಯ ಮಧ್ಯಭಾಗದಲ್ಲಿ ಪೂರ್ವ– ಪಶ್ಚಿಮವಾಗಿ, ಮೂರು ಸಾಲುಗಳಲ್ಲಿಟ್ಟು ಜೋಡಿಸಬೇಕು. ಈ ಕುಂಡ ಸಾಲುಗಳಲ್ಲಿ ಪ್ರತಿ ಬೆಳೆಯನ್ನು ಒಂದರ ನಂತರ ಒಂದರಂತೆ ಫಸಲನ್ನು ನೀಡುವಹಾಗೆ ಹಾಗೂ ವರ್ಷದ ಉದ್ದಕ್ಕೆ ಸಿಗುತ್ತಿರುವಂತೆ ಬೆಳೆದು ಬಳಸಬಹುದು.
- ಮೊದಲನೇ ಸಾಲಿನ ಕುಂಡಗಳಲ್ಲಿ ಸಸಿಗಳನ್ನು ನಾಟಿ ಮಾಡಬೇಕು. ಈ ಸಾಲಿನ ಕುಂಡಗಳಲ್ಲಿನ ಸಸಿಗಳು ಹೂವು ಬಿಡಲು ಪ್ರಾರಂಭಿಸಿದಾಗ ಹಾಗೂ ಪೂರ್ಣ ಫಸಲನ್ನು ಕಂಡಾಗ ಎರಡನೇ ಸಾಲಿನಲ್ಲಿನ ಕುಂಡಗಳಲ್ಲಿ ಸಸಿಗಳನ್ನು ನಾಟಿ ಮಾಡಬೇಕು. ಎರಡನೇ ಸಾಲಿನಲ್ಲಿನ ಗಿಡ ಬಳ್ಳಿಗಳು ಹೂವು ಬಿಟ್ಟು ಫಸಲು ಮುಗಿಯುತ್ತಿದ್ದಂತೆ ಮೂರನೇ ಸಾಲಿನ ಕುಂಡಗಳಲ್ಲಿ ಸಸಿಗಳನ್ನು ನಾಟಿ ಮಾಡಿ, ಇಲ್ಲವೇ ಬೀಜ ಬಿತ್ತನೆ ಮಾಡಿ ಅದು ಸಂಪೂರ್ಣವಾಗಿ ಮುಗಿಯುವ ಹೊತ್ತಿಗೆಮತ್ತೆ ಮೊದಲಿನ ಸಾಲಿನ ಕುಂಡಗಳಲ್ಲಿ ಈ ಕೆಲಸಗಳನ್ನು ಮತ್ತೆ ಪ್ರಾರಂಭಿಸಬೇಕು.
- ಉಪ್ಪರಿಗೆಯ ಮೇಲೆ ಮೂರು ಸಾಲುಗಳಂತೆ ಎಷ್ಟು ಸಾಧ್ಯವೋ ಅಷ್ಟು ಕುಂಡಗಳನ್ನಿಡಬೇಕು. ಬಹು ವಾರ್ಷಿಕ ಬೆಳೆಗಳಾದ ನಿಂಬೆ, ಬಾಳೆ, ನುಗ್ಗೆ, ಕರಿಬೇವು ಮುಂತಾದವುಗಳನ್ನು ದೊಡ್ಡ ಗಾತ್ರದ ಸಿಮೆಂಟ್ ತೊಟ್ಟಿಗಳಲ್ಲಿ ಅಥವಾ ಹಳೆ ಪ್ಲಾಸ್ಟಿಕ್ ಡ್ರಮ್‌ಗಳಲ್ಲಿ ಬೆಳೆಯಬೇಕು.



1. ಸಸ್ಯ ಹೇನುಗಳ ಹತೋಟಿಗೆ ಬೆಳ್ಳುಳ್ಳಿ ಎಣ್ಣೆಯನ್ನು ಸಿಂಪಡಿಸಿದರೆ ಸಾಕು. ಅರ್ಧ ಕಪ್ ಬೆಳ್ಳುಳ್ಳಿ ಇಲುಕುಗಳನ್ನು ನುಣ್ಣಗೆಜಜ್ಜಿ. ಅದಕ್ಕೆ ಅರ್ಧ ಕಪ್ ವನಸ್ಪತಿ ತೈಲವನ್ನು ಸೇರಿಸಿ ಒಂದು ವಾರದ ನಂತರ ಆ ಮಿಶ್ರಣಕ್ಕೆ 10 ಮಿ.ಲೀ. ಸಾಬೂನು ದ್ರಾವಣವನ್ನು ಸೇರಿಸಿ ಚೆನ್ನಾಗಿ ಕಲೆಹಾಕಬೇಕು. ಈ ಮಿಶ್ರಣದ ಒಂದು ಭಾಗಕ್ಕೆ ಹತ್ತು ಭಾಗದಷ್ಟು ನೀರನ್ನು ಬೆರೆಸಿ ಸಿಂಪಡಿಸಿದಲ್ಲಿ ಸಸ್ಯಹೇನು ಇಲ್ಲವಾಗುತ್ತವೆ.
2. ಬಸವನಹುಳು ಮತ್ತು ಕಂಬಳಿ ಹುಳುಗಳ ಹತೋಟಿಗೆ ಉಪ್ಪನ್ನು ಉದುರಿಸಿದರೆ ಅವು ಸಾಯುತ್ತವೆ.
3. ಸರ್ವ ಉದ್ದೇಶಿತ ತೋಟದ ಸಿಂಪರಣಾ ಔಷಧಿ: ಮೂರು ಮೆಣಸಿನ ಕಾಯಿಗಳನ್ನು ಅರ್ಧ ಈರುಳ್ಳಿ ಮತ್ತು ಒಂದು ಇಲುಕು ಬೆಳ್ಳುಳ್ಳಿಗಳನ್ನು ಅರೆದು ಬೇಯಿಸಿ, ಎರಡು ದಿನಗಳವರೆಗೆ ಜೋಪಾನ ಮಾಡಿಟ್ಟು ನಂತರ ಸೋಸಿ ಸಿಂಪಡಿಸಿದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ.
4. ಇರುವೆಗಳು ಮತ್ತು ಹೇನುಗಳಿಗೆ ಅರಿಶಿನದ ಪುಡಿಯನ್ನು ಉದುರಿಸಿದರೆ ಇರುವೆಗಳ ಕಾಟ ಇರುವುದಿಲ್ಲ.
5. ಬೇವಿನ ಬೀಜದ ಕಷಾಯವನ್ನು ಅಥವಾ ಬೇವಿನ ಎಣ್ಣೆಯ ಸಾಬೂನನ್ನು ನೀರಿನಲ್ಲಿ ಕರಗಿಸಿ ಸಿಂಪಡಿಸಬಹುದು.
6. ಬೇವಿನ ಸೊಪ್ಪಿನ ತಿಳಿ ದ್ರಾವಣ–ಇದನ್ನು ತಯಾರಿಸಲು 1 ಕಿ.ಗ್ರಾಂ ಬೇವಿನ ಸೊಪ್ಪನ್ನು 5 ಲೀಟರ್ ನೀರಿಗೆ ಹಾಕಿ ಒಂದು ರಾತ್ರಿಯ ಮಟ್ಟಿಗೆ ನೆನೆಯಲು ಬಿಡಬೇಕು. ನಂತರ ಅವುಗಳನ್ನು ನುಣ್ಣಗೆ ರುಬ್ಬಿ ಬಟ್ಟೆಯ ಮೂಲಕ ಸೋಸಿ, ತಿಳಿ ದ್ರಾವಣಕ್ಕೆ 10 ಗ್ರಾಂ ಗಳಷ್ಟು ಬಟ್ಟೆ ಒಗೆಯಲು ಬಳಸುವ ಸಾಬೂನನ್ನು ಸೇರಿಸಿ ಸಿಂಪಡಿಸಿದರೆ ಬಹಳಷ್ಟು ಕೀಟಗಳು ಹತೋಟಿಗೊಳ್ಳುತ್ತವೆ.
7. ಮಿಶ್ರ ಬೆಳೆ ಪದ್ಧತಿ ಅನುಸರಿಸುವುದರಿಂದಲೂ ಕೀಟ ಮತ್ತು ರೋಗಗಳನ್ನು ಹತೋಟಿ ಮಾಡಬಹುದು.
8. ಜೈವಿಕ ರೋಗನಾಶಕಗಳಾದ ಟ್ರೈಕೊಡರ್ಮ, ಬ್ಯಾಸಿಲಸ್ ಸಬ್‌ಟಿಲ್ಲಿಸ್, ಸುಡೋಮೊನಸ್ ಮುಂತಾದವುಗಳನ್ನು ಶೇ. 0.1 ರ ಪ್ರಮಾಣದಲ್ಲಿ ಸಿಂಪಡಿಸಿದರೆ ಕೆಲ ರೋಗಗಳನ್ನು ನಿಯಂತ್ರಿಸಬಹುದು.

## ಕೈತೋಟದಲ್ಲಿ ಕೃಷಿಯಲ್ಲಿ ಗಮನಿಸಬೇಕಾದ ಅಂಶಗಳು

- ಬಹುವಾರ್ಷಿಕ ಸಸ್ಯಗಳು / ಮರಗಳು ಕೈತೋಟದ ಒಂದು ಪಕ್ಕದಲ್ಲಿರಬೇಕು. ಇದರಿಂದ ಇತರೆ ತರಕಾರಿ ಬೆಳೆಗೆ ನೆರಳಾಗುವುದಿಲ್ಲ. ಒಂದು ಬಾರಿ ಈ ಬಹುವಾರ್ಷಿಕ ತರಕಾರಿಗಳನ್ನು ಹಾಕಿದ ನಂತರ ಹೆಚ್ಚಿನ ನಿಗಾ ವಹಿಸುವ ಅಗತ್ಯವಿರುವುದಿಲ್ಲ. ಇವುಗಳಲ್ಲಿ ಪ್ರತಿ ವರ್ಷವೂ ತರಕಾರಿಗಳನ್ನು ಹಬ್ಬಿಸಬಹುದು. ಬೇರು ಮತ್ತು ಗೆಡ್ಡೆ ತರಕಾರಿಗಳನ್ನು ಬದುಗಳ ಮೇಲೆ ಬೆಳೆಸಬೇಕು.
- ನೀರುಗಾಲುವೆಗಳು ಮತ್ತು ದಾರಿ ತೋಟದ ಎಲ್ಲಾ ಭಾಗಗಳನ್ನು ಸಂಧಿಸುವಂತಿರಬೇಕು. ಆದರೆ ಅವುಗಳಿಗೆ ಆದಷ್ಟು ಕಡಿಮೆ ಜಾಗ ಬಳಕೆಯಾಗಬೇಕು.
- ಹಣ್ಣಿನ ಬೆಳೆ ತಳಿಗಳನ್ನು ಆಯ್ಕೆ ಮಾಡುವಾಗ ಬೇಗ ಫಸಲು ಬಿಡುವ ಮತ್ತು ಗಿಡ್ಡ ತಳಿಗಳಿಗೆ ಆಧ್ಯತೆ ನೀಡಬೇಕು.
- ವರ್ಷದ ಯಾವುದೇ ಋತುವಿನಲ್ಲಿ ನಾಲ್ಕಾರು ಬೆಳೆಗಳಿರುವಂತೆ ತರಕಾರಿಗಳಲ್ಲಿ ಸೂಕ್ತ ಬೆಳೆ ಪರಿವರ್ತನೆಯನ್ನು ಹೊಂದಿರಬೇಕು. ವಿವಿಧ ತಾಕುಗಳಿರುವಂತೆ ಏಕಕಾಲಕ್ಕೆ ಕೊಯ್ಲಿಗೆ ಬರುವ ಬದಲಾಗಿ ಬೇರೆ ಬೇರೆ ಸಮಯಕ್ಕೆ ಕೊಯ್ಲಿಗೆ ಬರುವಂತಿರಬೇಕು.

## ಕೀಟ ಮತ್ತು ರೋಗಗಳನ್ನು ಹತೋಟಿ ಮಾಡುವ ವಿಧಾನಗಳು

**ಬೇಸಾಯ ವಿಧಾನ:** ಕಳೆಗಳನ್ನು ಕಿತ್ತು ಹಾಕುವುದು. ತಾರಸಿಯ ಮೋಟು ಗೋಡೆಯ ಒಳ ಅಂಚಿನ ಉದ್ದಕ್ಕೆ ಚೆಂಡು ಹೂವು ಅಥವಾ ಸೇವಂತಿಗೆ ಅಥವಾ ಸಾಸಿವೆ ಗಿಡಗಳನ್ನು ಬೆಳಸಿ ಬೋನು ಬೆಳೆಗಳಾಗಿ ಬಳಸಿಕೊಂಡಲ್ಲಿ, ಹಾನಿಯ ಪ್ರಮಾಣವನ್ನು ಕಡಿಮೆ ಮಾಡಬಹುದು.

**ಯಾಂತ್ರಿಕ ವಿಧಾನ:** ಕೀಟಗಳನ್ನು (ಮೊಟ್ಟೆ, ಮರಿ, ಕೋಶಹಾಗೂ ಪ್ರಾಯದಕೀಟ) ಕೈಯಿಂದ ಆರಿಸಿ ಸಾಯಿಸುವುದು. ಹಾನಿಗೀಡಾದ ಸಸ್ಯಭಾಗಗಳನ್ನು ಕತ್ತರಿಸಿ ಸುಡುವುದು. ನಂಜು ರೋಗಾಣುಗಳಿಂದ ಹಾಗೂ ಮಣ್ಣಿನಲ್ಲಿ ಹರಡುವ ರೋಗಾಣುಗಳಿಂದ ಹಾನಿಗೀಡಾದ ಗಿಡಗಳನ್ನು ಬೇರು ಸಹಿತಕಿತ್ತು ಸುಡುವುದು.

**ಸಾವಯವ ವಿಧಾನ:** ಈ ವಿಧಾನದಲ್ಲಿ ಸಾವಯವ ಔಷಧಿಗಳನ್ನು ಬಳಸುವುದು ಒಳ್ಳೆಯದು. ಅವುಗಳ ಬೆಲೆ ಕಡಿಮೆ. ಅವು ಪರಿಣಾಮಕಾರಿಯಾಗಿರುತ್ತವೆ ಮತ್ತು ಪರಿಸರಪ್ರೇಮಿ ಸಹ.



- ❖ ಹಾಕಿದ ನೀರಿನ ಹೆಚ್ಚುವರಿ ಭಾಗ ಬಸಿರಂಧ್ರದ ಮೂಲಕ ಹೊರ ಹೋಗುವಂತೆ ವ್ಯವಸ್ಥೆ ಮಾಡಿರಬೇಕು. ಈ ಗಿಡಗಳನ್ನು ತಾರಸಿಯ ಪಶ್ಚಿಮದಕಡೆಯಿಡಬೇಕು. ತಾರಸಿಯ ಗಿಡ್ಡ ಗೋಡೆಯು ಗಾಳಿಯ ಹೊಡೆತದಿಂದ ಗಿಡಗಳನ್ನು ರಕ್ಷಿಸುತ್ತದೆ.
- ❖ ಒಂದು ವೇಳೆಬಳ್ಳಿ ಸಸ್ಯಗಳನ್ನು ಗಿಡ್ಡ ಗೋಡೆಯಿಂದ ಮೇಲಕ್ಕೆ ಹಬ್ಬಿಸಿ ಬೆಳೆಯುವ ಉದ್ದೇಶವಿದ್ದಲ್ಲಿ ಉದ್ದಕ್ಕೆ ತಂತಿಯ ಬೇಲಿಯನ್ನು ನಿರ್ಮಿಸಬಹುದು. ಈ ಬೇಲಿಗೆ ಸೋರೆಕಾಯಿ, ಹೀರೆಕಾಯಿ, ಹಾಗಲಕಾಯಿ, ತೊಂಡೆಕಾಯಿ, ಕುಂಬಳ, ಬಳ್ಳಿ ಬಸಳೆ, ಹಬ್ಬು ಬೀನ್ಸ್, ಪಡವಲಕಾಯಿ ಮುಂತಾದುವುಗಳನ್ನು ಹಬ್ಬಿಸಬಹುದು.
- ❖ ನೆರಳು ಪರದೆ: ನೆರಳು ಪರದೆ ತಾರಸಿ ತೋಟಕ್ಕೆ ಅನಿವಾರ್ಯವಲ್ಲ, ಆದರೆ ನೆಟ್ಟರೆ ಹೆಚ್ಚಿನ ಕೀಟಗಳನ್ನು ನಿಯಂತ್ರಿಸುತ್ತದೆ ಮತ್ತು ಬೇಸಿಗೆಯಲ್ಲಿ ಹೆಚ್ಚಿನ ತೊಂದರೆಗಳಿಲ್ಲದೆ ತರಕಾರಿಗಳನ್ನು ಬೆಳೆಯಬಹುದು. ಶೇ. 50 ರಷ್ಟು ಬಿಳಿ ಅಥವಾ ಹಸಿರು ಬಣ್ಣದ ನೆರಳು ಪರದೆ ಸೂಕ್ತವಾಗಿರುತ್ತದೆ.

**ಸಸಿಗಳನ್ನು ಬೆಳೆಸಲು ಪ್ರೋಟ್ರೇ ವಿಧಾನ:** ಒಂದು ಟ್ರೇಗೆ 1 ರಿಂದ 1.25 ಕಿ.ಗ್ರಾಂ. ಕೊಕೊಪಿಟ್ ಬೇಕಾಗುತ್ತದೆ. ಈ ಕೊಕೊಪೀಟ್ ಗೆ ತಲಾ 10 ಗ್ರಾಂ. ನಂತೆ ಅಜೋಸ್ಪರಿಲಂ ಅಥವಾ ಅಜಟೋಬ್ಯಾಕ್ಟರ್, ಸುಡೋಮೊನಾಸ್ ಫ್ಲೂರೊಸೆನ್ಸ್ ಮತ್ತು ಟ್ರೈಕೋಡರ್ಮಾ ಹಾರ್ಜಿಯಾನಮ್‌ನಿಂದ ಉಪಚರಿಸಿದ ನಂತರ ಟ್ರೇಗಳನ್ನು ಕೊಕೊಪಿಟ್‌ನಿಂದ ತುಂಬಿ, ಸಣ್ಣ ಗುಳಿಗಳನ್ನು ಮಾಡಿ ಪ್ರತಿ ಗುಣಿಗೆ ಒಂದು ಬೀಜದಂತೆ ಬೀಜವನ್ನು ಬಿತ್ತಬೇಕು. ಹೀಗೆ ಬಿತ್ತಿದ ನಂತರ ನಿರ್ಜಲೀಕರಿಸಿದ ಕೊಕೊಪಿಟ್‌ನಿಂದ ಮುಚ್ಚಿ, ಒಂದರ ಮೇಲೊಂದರಂತೆ ಒಟ್ಟು 5 ರಿಂದ 10 ಟ್ರೇಗಳನ್ನು ಪೇರಿಸಿ 40 ಗೇಜ್ ದಪ್ಪದ ಪಾಲಿಥಿನ್ ಹಾಳೆಯಿಂದ ಮುಚ್ಚಿ ಪಾಲಿಹೌಸ್ / ನೆರಳುಪರದೆ ಮನೆಯಲ್ಲಿ ಇಡಬೇಕು. ಇದರಿಂದ ಬೀಜಗಳು ಸಮಾನವಾಗಿ ಮತ್ತು ಶೀಘ್ರವಾಗಿ ಮೊಳಕೆಯೊಡೆಯುತ್ತವೆ. 3 ಅಥವಾ 4ನೇ ದಿನದಂದು ಟ್ರೇಗಳನ್ನು ಹರಡಿ ಪ್ರತಿದಿನ 2 ಬಾರಿ ನೀರುಣಿಸಬೇಕು. 6 ರಿಂದ 7 ನೇ ದಿನಕ್ಕೆ ಬೀಜಗಳು ಮೊಳಕೆಯೊಡೆಯುತ್ತವೆ. ಬೀಜ ಬಿತ್ತಿದ 15 ದಿನಗಳ ನಂತರ ನೀರಿನಲ್ಲಿ ಕರಗುವ 19:19:19 ರಸಗೊಬ್ಬರವನ್ನು (3 ಗ್ರಾಂ./ಲೀ.) ಸಿಂಪಡಿಸಬೇಕು. ಈ ವಿಧಾನದಲ್ಲಿ ತಯಾರುಮಾಡಲಾದ ಸಸಿಗಳು ಸಾಮಾನ್ಯವಾಗಿ 21 ರಿಂದ 25 ದಿನಗಳಲ್ಲಿ ನಾಟಿಮಾಡಲು ಸಿದ್ಧವಾಗಿರುತ್ತವೆ.

**ಬಿತ್ತನೆ ವಿಧಾನಗಳು:** ಸಸಿ ಮಡಿ ಮಾಡಿ, ನಂತರ ಬದನೆ, ಮೆಣಸಿನಕಾಯಿ, ದೊಣ್ಣೆ ಮೆಣಸಿನಕಾಯಿ, ಟೊಮೊಟೋ, ಹೂಕೋಸು, ಎಲೆಕೋಸು, ನವಿಲುಕೋಸು ಮುಂತಾದವುಗಳನ್ನು ನಾಟಿ ಮಾಡಬಹುದು. ಟ್ರೇನಲ್ಲಿ ಪಾತಿಗಳನ್ನು ಚೆನ್ನಾಗಿ ಸಿದ್ಧಗೊಳಿಸಿ

ಬೀಜ ಬಿತ್ತಿ ನೀರು ಹಾಕುತ್ತಿದ್ದಲ್ಲಿ ಸಸಿಗಳು 3–4 ವಾರಗಳಲ್ಲಿ ನಾಟಿ ಮಾಡಲು ಸಿದ್ಧವಿರುತ್ತವೆ. ಅಂತಹಸಸಿಗಳನ್ನು ಜೋಪಾನವಾಗಿ ಕುಂಡದಲ್ಲಿನ ಮಧ್ಯೆ ಹೆಪ್ಪು ಹಿಡಿಸುವಷ್ಟೇ ಗಾತ್ರದಕುಳಿ ಮಾಡಿ, ಪ್ರತಿ ಕುಳಿಯಲ್ಲಿ ಎರಡು ಸಸಿಗಳಂತೆ ನಾಟಿ ಮಾಡಿ ಬುಡದಸುತ್ತ ಹಸಿಮಣ್ಣನ್ನು ಬಿಗಿಯಾಗಿ ಅದುಮಬೇಕು.

**ನೇರವಾಗಿ ಬೀಜ ಬಿತ್ತುವುದು:** ತಿಂಗಳ ಹುರುಳಿ, ಬಟಾಣಿ, ಗೋರಿಕಾಯಿ, ಅಲಸಂದಿ, ಬೆಂಡೆ, ಕುಂಬಳ, ಹಾಗಲ, ಹೀರೆ, ಸೋರೆ, ಪಡವಲ, ಕಲ್ಲಂಗಡಿ, ಕರಬೂಜ, ತುಪ್ಪದಹೀರೆ, ಬೂದುಗುಂಬಳ, ಸೌತೆ, ಮೂಲಂಗಿ ಕ್ಯಾರೆಟ್, ಬೀಟ್‌ರೂಟ್, ದಂಟು, ಕೊತ್ತಂಬರಿ ಇತ್ಯಾದಿಗಳ ಬೀಜ ಅಥವಾ ಕಾಳುಗಳನ್ನು ನೇರವಾಗಿ ಬಿತ್ತಬೇಕು. ಬೀಜ ದೊಡ್ಡವಿದ್ದರೆ ಬಿತ್ತುವ ಆಳ 1 ರಿಂದ 2 ಸೆಂ.ಮೀ. ಇರುತ್ತದೆ. ದಂಟು ಸೊಪ್ಪಿನ ಬೀಜವನ್ನು ಪುಡಿ ಗೊಬ್ಬರದೊಂದಿಗೆ ಬೆರೆಸಿ ಬಹು ಮೇಲೆಯೇ ಬೀಳುವಂತೆ ಬಿತ್ತಬೇಕು.

**ಕುಂಡಗಳಲ್ಲಿ ಸಸಿಗಳನ್ನು ನೆಡುವುದು:** ಮಣ್ಣಿನ ಕುಂಡಗಳ ಬಸಿ ರಂಧ್ರದ ಒಳಮಗ್ಗುಲಲ್ಲಿ ಸಣ್ಣಕಲ್ಲು ಅಥವಾ ಹೆಂಚಿನ ಚೂರುಗಳನ್ನು ಹೊದಿಸಿಟ್ಟಲ್ಲಿ ಮಣ್ಣು ಮತ್ತು ಗೊಬ್ಬರಗಳ ಮಿಶ್ರಣವು ನೀರು ಹಾಕಿದಾಗ ಕೊಚ್ಚಿ ಹೋಗುವುದಿಲ್ಲ. ನಂತರದಪ್ಪ ಮರಳನ್ನು ಉದುರಿಸಿದರೆ ಅದು ಸಂದುಗಳನ್ನು ಭರ್ತಿ ಮಾಡುವುದು. ಈ ಮರಳಿನ ಮೇಲೆ ಒಣ ಎಲೆಗಳನ್ನು 3 ರಿಂದ 5 ಸೆಂ.ಮೀ. ದಪ್ಪಕ್ಕೆ ಹರಡಬೇಕು. ನಂತರ ಮುಕ್ಕಾಲು ಭಾಗದವರೆಗೆ ಕುಂಡ ಮಿಶ್ರಣವನ್ನು ತುಂಬಿ ನೀರು ಹನಿಸುವಡಬ್ಬಿಯಿಂದ ನೀರನ್ನು ಹಾಕಬೇಕು. ಹೆಚ್ಚುವರಿ ನೀರು ಬಸಿರಂಧ್ರದ ಮೂಲಕ ಹೊರಬೀಳುತ್ತದೆ. ಬೀಜ ಬಿತ್ತಿದ ಸುಮಾರು ನಾಲ್ಕರಿಂದ ಐದು ವಾರಗಳ ನಂತರ ಸಸಿಗಳನ್ನು ಮಣ್ಣು ಹೆಪ್ಪು ಸೊಪ್ಪು ತರಕಾರಿಗಳಾದರೆ, ಬೀಜವನ್ನು ಸಮಪ್ರಮಾಣದ ನಯವಾದ ಮರಳು ಮತ್ತು ಮಣ್ಣಿನೊಂದಿಗೆ ಬೆರೆಸಿ ಉದುರಿಸಬೇಕು. ಹೀಗೆ ಉದುರಿಸಿ ಬಿತ್ತಿದ ನಂತರ ಮೇಲೆ ಪುಡಿ ಮಣ್ಣನ್ನು ಉದುರಿಸಿದಲ್ಲಿ ನೀರು ಹಾಕಿದಾಗ ಬೀಜ ತೇಲುವುದಿಲ್ಲ. ನಂತರ ತುಂತುರು ಹನಿಗಳಂತೆ ನೀರು ಚಿಮ್ಮಿಸುವ ಸಿಂಪರಣಾ ಸಲಕರಣೆಯ ಮೂಲಕ ನೀರು ಹಾಕುವುದು.

**ಗೊಬ್ಬರ ಮಿಶ್ರಣ :** ಸಾವಯವ ಗೊಬ್ಬರಗಳನ್ನು ಸರಿಯಾದ ಪ್ರಮಾಣದಲ್ಲಿ ಉಪಯೋಗಿಸುವುದರಿಂದ ಮಣ್ಣಿನ ಫಲವತ್ತತೆ ಮತ್ತು ಗುಣಮಟ್ಟ ಹೆಚ್ಚುತ್ತದೆ. ಆದ್ದರಿಂದ ಮನೆಯ ತ್ಯಾಜ್ಯ ವಸ್ತುಗಳನ್ನು ಗೊಬ್ಬರವಾಗಿ ಪರಿವರ್ತಿಸಿ ಮಣ್ಣು, ಮರಳು ಮತ್ತು ಇತರೆ ಗೊಬ್ಬರಗಳ ಜೊತೆ ಮಿಶ್ರಣಮಾಡಿ ಬೆಳೆ ಬೆಳೆಯಬಹುದು. ಪ್ರತಿ ಚೀಲಕ್ಕೆ 12 ಕಿ. ಗ್ರಾಂ.



ಮಿಶ್ರಣದಂತೆ ಒಟ್ಟು 50 ಚೀಲ / ಕುಂಡಗಳನ್ನು ತುಂಬಲು ಒಟ್ಟು 600 ಕಿ.ಗ್ರಾಂ. ಮರಳು, ಗೊಬ್ಬರ ಮತ್ತು ಮಣ್ಣು ಬೇಕಾಗುತ್ತದೆ. ನೀರಿನಲ್ಲಿ ಕರಗುವ 19:19:19 ರಸಗೊಬ್ಬರವನ್ನು (3 ಗ್ರಾಂ./ಲೀ.) ಸಿಂಪಡಿಸಬಹುದು. ಇದರೊಟ್ಟಿಗೆ ಅಲ್ಲದೇ ಬೇವಿನ / ಹೊಂಗೆ ಹಿಂಡಿ, ಟ್ರೈಕೊಡರ್ಮ ಕೊಡುವುದರಿಂದ ಉತ್ತಮ ಇಳುವರಿ ಮತ್ತು ಗುಣಮಟ್ಟವನ್ನು ಹೆಚ್ಚಿಸಬಹುದಾಗಿದೆ.

**ಸಾವಯವ ಗೊಬ್ಬರಗಳು:** ಸಾವಯವ ಗೊಬ್ಬರಗಳಿಂದ ಹಲವು ಪೋಷಕಾಂಶಗಳು ಸಸ್ಯಗಳಿಗೆ ದೊರೆಯುತ್ತವೆ. ಸಾರಜನಕ, ರಂಜಕ ಮತ್ತು ಪೊಟ್ಯಾಷ್‌ಗಳಲ್ಲದೇ ಇನ್ನಿತರ ಲಘು ಪೋಷಕಾಂಶಗಳೂ ತಕ್ಕಮಟ್ಟಿಗೆ ದೊರೆಯುತ್ತವೆ. ಮುಖ್ಯವಾಗಿ ಈ ಗೊಬ್ಬರಗಳು ಮಣ್ಣಿನಲ್ಲಿ ಸತ್ವ ಉಳಿಯುವಂತೆ ಮಾಡಿ ಮಣ್ಣಿನ ರಚನೆಯನ್ನು ಉತ್ತಮ ಗೊಳಿಸುವುದಲ್ಲದೇ ಸಾವಯವ ಗೊಬ್ಬರಗಳ ಬಳಕೆಯಿಂದ ಮಣ್ಣಿನಲ್ಲಿ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ. ಹೀಗಾಗಿ ಸಸ್ಯಗಳಿಗೆ ಸಾವಯವ ಗೊಬ್ಬರಗಳ ಪೂರೈಕೆ ಬಹು ಅವಶ್ಯಕ. ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್, ಎರೆಹುಳು ಗೊಬ್ಬರ, ಹಸಿರೆಲೆ ಇತ್ಯಾದಿ ಗೊಬ್ಬರಗಳನ್ನು ಸಾವಯವ ಗೊಬ್ಬರಗಳಾಗಿ ಬಳಸಬಹುದು

**ಲಘು ಪೋಷಕಾಂಶಗಳ ನಿರ್ವಹಣೆಗೆ ತರಕಾರಿ ಸ್ಪೆಷಲ್** – ಐ. ಸಿ. ಎ. ಆರ್. – ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು ಅಭಿವೃದ್ಧಿ ಪಡಿಸಿರುವ ತರಕಾರಿ ಸ್ಪೆಷಲ್ ಲಘು ಪೋಷಕಾಂಶವನ್ನು ಪ್ರತಿ ಲೀಟರಿಗೆ 5 ಗ್ರಾಂ. ನಂತೆ ಮಿಶ್ರಮಾಡಿ ನಾಟಿ ಮಾಡಿದ 45, 60 ಮತ್ತು 75 ದಿನಗಳಲ್ಲಿ ಮೂರು ಬಾರಿ ಸಿಂಪರಣೆ ಮಾಡುವುದು.

**ನೀರಿನ ನಿರ್ವಹಣೆ:** ಜಮೀನಿಗೆ ನೀರನ್ನು ಒದಗಿಸುವಾಗ ಅದನ್ನು ನೀರಾವರಿ ಎನ್ನುತ್ತೇವೆ. ಆದರೆ ತಾರಸಿ ತೋಟ ಮಾಡುವವರು ಸಹಜವಾಗಿ ಮುಂದಿಡುವ ಪ್ರಶ್ನೆ ಎಂದರೆ ನೀರನ್ನು ಹಾಕುವಾಗ ತಾರಸಿಗೆ ಹಾನಿ ಆಗುವುದಿಲ್ಲವೇ? ಹಾಗೂ ಜಿನುಗುವುದಿಲ್ಲವೇ? ಮುಂತಾಗಿ ಈ ಪ್ರಶ್ನೆಗಳಿಗೆ ಸರಳವಾಗಿ ಉತ್ತರಿಸಬಹುದು. ಯಾವುದೇ ಕಟ್ಟಡದಉತ್ತಮ ತಾರಸಿಯು ಅಲ್ಲಿ ಇಟ್ಟಿರುವ ಕುಂಡಗಳಿಗೆ ನೀರನ್ನು ಹಾಕಿದಾಗ ತಡೆಯುವ ಶಕ್ತಿ ಇರುತ್ತದೆ. ಆದರೆ ತಾರಸಿ ಬಲಿಷ್ಟ ವಿದೆಯೇ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಎಲ್ಲಿಯೂ ತೇವ ಇಳಿಯದಂತೆ ನೋಡಿಕೊಳ್ಳಬೇಕು. ಗಿಡಗಳಿಗೆ ಎಷ್ಟು ಬೇಕೋ ಅಷ್ಟು ನೀರನ್ನು ಕೊಡಬೇಕು. ಕುಂಡವೊಂದಕ್ಕೆ ದಿನಕ್ಕೊಮ್ಮೆ ಅಥವಾ ದಿನದಲ್ಲಿ ಎರಡು ಸಾರಿ ಪ್ಲಾಸ್ಟಿಕ್ ಮಗ್‌ನಲ್ಲಿ ನಿಧಾನವಾಗಿ ನೀರು ಹಾಕಿದರೆ ಈ ರಂಧ್ರದ ಮೂಲಕ ಹೊರ ಬೀಳುವುದು ತಪ್ಪುತ್ತದೆ.